# IN THE COURT OF THE ADDL. SENIOR CIVIL JUDGE & JMFC., GUBBI
# OS – **108/2022**

Witness present and duly sworn on : 12.08.2025.

Further cross Examination: by Counsel for Defendant No.5, 7, 8, 10. :

ನನಗೆ ಯಾರು ಅಕ್ಕ ತಂಗಿಯರು ಇಲ್ಲ. ನನ್ನ ಸಹೋದರಿಯಾದ ಕೆಂಪಮ್ಮ ರವರನ್ನು ಹೆಬ್ಬೂರು ಹೋಬಳಿ, ಕೋಡಿಪಾಳ್ಯದ ನಾರಾಯಣಪ್ಪರವರೊಂದಿಗೆ ಮದುವೆ ಮಾಡಿದ್ದೇವೆ ಎಂದರೆ ಸುಳ್ಳು. ನನ್ನ ಇನ್ನೊಬ್ಬ ಸಹೋದರಿಯಾದ ಕೆಂಪಮ್ಮ ರವರನ್ನು ಮಾಯಸಂದ್ರ ಹ ಹೋಬಳಿ, ನಾಗೇಗೌಡನಪಾಳ್ಯದ ಹಟ್ಟಿಗೌಡರವರೊಂದಿಗೆ ಮದುವೆ ಮಾಡಿದ್ದೇವೆ ಎಂದರೆ ಸುಳ್ಳು. ನನ್ನ ಇನ್ನೊಬ್ಬ ಸಹೋದರಿಯಾದ ಮಂಜುಳಾ ರವನ್ನು ಮಾಯಸಂದ್ರ ಹೋಬಳಿ, ಅರಳಕೆರೆ ಊರಿನ ಶಿವಣ್ಣ ರವರೊಂದಿಗೆ ಮದುವೆ ಮಾಡಿದ್ದೇವೆ ಎಂದರೆ ಸುಳ್ಳು.

ನ್ಯಾಯಾಲಯದ ಪ್ರಶ್ನೆಃ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುವುದು ಅಪರಾಧ ಎಂದು ಮಾಹಿತಿ ಇದೆಯಾ?

ಸಾಕ್ಷಿಯ ಉತ್ತರಃ ಮಾಹಿತಿ ಇದೆ.

4 ನೇ ಪ್ರತಿವಾದಿ ರಂಗೇಗೌಡ ಬಿನ್ ಮಾಸೇಗೌಡರವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ಸದರಿ ರಂಗೇಗೌಡ ಮತ್ತು ಆತನ ಹೆಂಡತಿಯಾದ ಗಂಗಮ್ಮ ರವರಿಗೆ ಕೆಂಪಮ್ಮ, ಲಕ್ಷ್ಮೀ, ಮಂಜುಳಾ ಮತ್ತು ಶಾಂತಿ ಎಂಬ 4 ಜನ ಹೆಣ್ಣು ಮಕ್ಕಳು ಎಂದರೆ ಸುಳ್ಳು. ಜಯಮ್ಮ ಕೋಂ ಗೋವಿಂದಪ್ಪ ರವರಿಗೆ ಮಂಜುಳಾ ಮತ್ತು ಕುಮಾರಿ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸುಳ್ಳು. ಸದರಿ ಹೆಣ್ಣು ಮಕ್ಕಳು ಇದ್ದರು ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರು ಇಲ್ಲದೆ ಇರುವ ಕಾರಣ ಮಾಡಿಲ್ಲ.

ನಮ್ಮ ಗ್ರಾಮದಲ್ಲಿ ನಮಗೆ ವಾಸದ ಮನೆ ಇದೆ ಎಂದರೆ ಸರಿ. ಸುಮಾರು 4 ವರ್ಷದ ಹಿಂದೆ 12 ಚದರ ಅಡಿ RCC ಮನೆ ನಾನು ಕಟ್ಟಿಸಿದ್ದೇನೆಂದರೆ ಸರಿ. ಸದರಿ ಮನೆಯ ಪಕ್ಕದಲ್ಲಿ ನನ್ನ ತಾತನ ಭಾಗಾಂಶಕ್ಕೆ ಬಂದಿರುವ ಹಂಚಿನ ಮನೆ ಇದೆ ಎಂದರೆ ಅದು ನಮ್ಮ ಒಟ್ಟು ಕುಟುಂಬದ ಆಸ್ತಿ. ಸದರಿ ಮನೆಯು ನನ್ನ ತಾತನ ಭಾಗಾಂಶಕ್ಕೆ ಬಂದಿದ್ದು , ಉಳಿದವರು ಬೇರೆ ಕಡೆ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಗೋವಿಂದಪ್ಪನ ಮಕ್ಕಳಾದ ಕೆಂಪೆಗೌಡ ಮತ್ತು ಕೆಂಪರಾಜು ಅಂದರೆ ಈ ದಾವೆಯ 12 ಮತ್ತು 13 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಒಟ್ಟು ಕುಟುಂಬದಲ್ಲಿ ಇದ್ದಾರೆ. ಗಂಗಮ್ಮನವರ ಮಗನಾದ 12 ನೇ ಪ್ರತಿವಾದಿ ಕೆಂಪೆಗೌಡ ಹಾಗೂ ಜಯಮ್ಮನ ಮಗನಾದ 13 ನೇ ಪ್ರತಿವಾದಿ ಕೆಂಪರಾಜು ರವರು ಪ್ರತ್ಯೇಕವಾಗಿ ಅವರ ಸಂಸಾರದೊಂದಿಗೆ ವಾಸ ಇದ್ದಾರೆ ಎಂದರೆ ಸರಿ. ಅವರಿಬ್ಬರು ಸುಮಾರು 20 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸುಮಾರು 10 ವರ್ಷಗಳಿಂದ ಇದ್ದಾರೆ. 5 ನೇ ಪ್ರತಿವಾದಿ ಕೆಂಪೆಗೌಡ @ ಸುಬ್ಬಣ್ಣ ಮತ್ತು 7 ನೇ ಪ್ರತಿವಾದಿ ಕೆಂಪೆಗೌಡರವರ ವಾಸದ ಮನೆಗಳು ಕೆಂಚನಹಳ್ಳಿಯಲ್ಲಿ ಇವೆ. ಸದರಿ ಮನೆಗಳು ಗ್ರಾಮದಲ್ಲಿ ಇದೆಯಾ ಅಥವಾ ತೋಟದಲ್ಲಿ ಇದೆಯಾ ಎಂದರೆ ಗ್ರಾಮದಲ್ಲಿ ಹಳೆ ಮನೆಗಳು ಇರುವ ಕಾರಣ ತೋಟದಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಸರ್ವೆ ನಂ.115/1 ಎ ರ ಮನೆ ಅವರ ತಂದೆಯ ಕಾಲದಲ್ಲಿ ಸುಮಾರು 40 ವರ್ಷಗಳಿಂದ ಕಟ್ಟಿದ್ದು, ಸದರಿ ಮನೆಯಲ್ಲಿ 5 ಮತ್ತು 7 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸರಿ. ಕೆಂಪೆಗೌಡರವರ ಜೀವಿತ ಅವಧಿಯಲ್ಲಿ ಇದ್ದಂತಹ ಮನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಜಯರಾಮು ರವರು ಇತ್ತೀಚೇಗೆ ಸುಮಾರು 4 ವರ್ಷದ ಹಿಂದೆ ಊರಿನಲ್ಲಿ RCC ಮನೆ ಕಟ್ಟಿದ್ದಾರೆ ಎಂದರೆ ಸರಿ. ಸದರಿ ಮನೆಯು ಸರ್ವೆ ನಂ.115/1 ಎ ರಲ್ಲಿ ಇದೆ ಎಂದರೆ ಸರಿ. 10 ನೇ ಪ್ರತಿವಾದಿ ಮಾಸೇಗೌಡರವರ ಮನೆ ಸರ್ವೆ ನಂ.115/2 ರಲ್ಲಿ ಇದೆ ಎಂದರೆ ಸುಳ್ಳು. 10 ನೇ ಪ್ರತಿವಾದಿಯ ಮನೆ ಬೇರೆ ಸರ್ವೆ ನಂಬರ್ ನಲ್ಲಿ ಇದೆ. ಸದರಿ 10 ನೇ ಪ್ರತಿವಾದಿಯ ಮನೆ ಸರ್ವೆ ನಂ.114 ರಲ್ಲಿ ಇದೆ. ಸದರಿ ಮನೆಯನ್ನು ಮಾಸೇಗೌಡರವರು ಸುಮಾರು 20 ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಕೆಂಪೆಗೌಡ ಹಾಗೂ ಆತನ ಮಕ್ಕಳು ಸುಮಾರು 25-30 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇತ್ತೀಚೇಗೆ

ಪ್ರತ್ಯೇಕವಾಗಿ ಇದ್ದಾರೆ. ನಮಗೆ ಇರುವ ಮನೆ ಹಾಗೂ ರಂಗೇಗೌಡ/4 ನೇಪ್ರತಿವಾದಿ, 12, 13 ನೇ ಪ್ರತಿವಾದಿಗಳು, 5 ರಿಂದ 8 ಹಾಗೂ 10 ನೇ ಪ್ರತಿವಾದಿಗಳು ವಾಸ ಇರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅವರವರ ಸ್ವಂತ ದುಡಿಮೆಯಿಂದ ಸದರಿ ಮನೆಗಳನ್ನು ಕಟ್ಟಿರುವ ಕಾರಣ ಸೇರಿಸಿಲ್ಲ ಎಂದರೆ ಹಳೆ ಮನೆಗಳು ಒಟ್ಟಿಗೆ ಇವೆ ಹಾಗೂ ಸದರಿ ಮನೆಗಳನ್ನು ಒಟ್ಟು ಕುಟುಂಬದಲ್ಲಿ ನಿರ್ಮಾಣ ಮಾಡಿದ್ದಾರೆ. ಆ ರೀತಿ ನಿರ್ಮಾಣ ಆಗದೆ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕೆಂಪೆಗೌಡ ರವರು ಅವರ ಜೀವಿತ ಅವಧಿಯಲ್ಲಿ SBI ಬ್ಯಾಂಕ್ ನಲ್ಲಿ ಸಾಲ ಮಾಡಿದ್ದು ಅದನ್ನು ಇತ್ತಿಚೇಗೆ ತಿರುವಳಿ ಮಾಡಿರುವ ವಿಚಾರ ಗೊತ್ತಿದೀಯಾ ಎಂದರೆ ಸಾಲ ಮಾಡಿಲ್ಲ. ಸದರಿ ಕೆಂಪೆಗೌಡ ರವರು ವ್ಯವಸಾಯಕ್ಕೆ ಅನೂಕೂಲ ಆಗಲು ಟ್ರಾಕ್ಟರ್ ಯಾವಾಗ ಖರೀದಿ ಮಾಡಿದ್ದರು ಎಂದರೆ 1983-84 ರಲ್ಲಿ ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ್ದರು. 2008 ರಲ್ಲಿ ತುಮಕೂರಿನ SBI Bank ನಲ್ಲಿ ಕೆಂಚನಹಳ್ಳಿಯ ಸರ್ವೆ ನಂ.85/1 ಅಡಮಾನ ಮಾಡಿ ಕೆಂಪೆಗೌಡ ರವರು ಅವರ ಹೆಸರಿಗೆ ಸದರಿ ಟ್ರಾಕ್ಟರ್ ಖರೀದಿ ಮಾಡಿದ್ದರು ಎಂದರೆ ಸರಿ. ಕೆಂಪೆಗೌಡ ರವರು ದಿನಾಂಕಃ 01.08.2017 ರಂದು ಪೌತಿಯಾಗಿದ್ದಾರೆ ಎಂದರೆ ಸರಿ. ಸದರಿ ಟ್ರಾಕ್ಟರ್ ಅಣ್ಣ ತಮ್ಮಂದಿರ ಭಾಗಾಂಶದಲ್ಲಿ 10 ನೇ ಪ್ರತಿವಾದಿ ಮಾಸೇಗೌಡರವರ ಭಾಗಕ್ಕೆ ಹೋಗಿದೆ ಎಂದರೆ ಒಟ್ಟಿಗೆ ಇದ್ದಾಗ ಏನೂ ಆಗಿದೆ ಎಂದು ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಟ್ರಾಕ್ಟರ್ ಇತ್ತು ಅವರು ಬಳಸುತ್ತಿದ್ದರು ಎಂದರೆ ಸರಿ. 10 ನೇ ಪ್ರತಿವಾದಿಯು ಸದರಿ ಸಾಲವನ್ನು 2021 ರಲ್ಲಿ ಮರುಪಾವತಿ ಮಾಡಿ ಆಧಾರ ಖುಲಾಸೆ ಪತ್ರ ಪಡೆದಿದ್ದಾರೆಂದರೆ ಸರಿ.

ದಾವಾ ಐಟಂ ನಂ.2 ಸರ್ವೆ ನಂ.93/4 ರಲ್ಲಿ 34 ಗುಂಟೆ ಜಮೀನಿನ ಕಂದಾಯ ದಾಖಲೆಗಳಲ್ಲಿ ತಿಮ್ಮಯ್ಯ ಎಂಬ ಹೆಸರು ಇದೆ ಎಂದರೆ ಸರಿ. ಸದರಿ ತಿಮ್ಮಯ್ಯ ಗೇಣಿಗೆ ಮಾಡುತ್ತಿದ್ದರು. 2023-2024, 2024-2025 ರಲ್ಲಿ ತಿಮ್ಮಯ್ಯನವರ ಹೆಸರು ಬರುತ್ತಿದೆ ಎಂದರೆ ಸರಿ. ಅವರು ಗೇಣಿ ಮಾಡುತ್ತಿದ್ದಾರೆ ಎಂದು ದಾಖಲೆ ಇರುವುದಿಲ್ಲ. ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಗೇಣಿಯ ವಿಚಾರ ಹೇಳಿರುವುದಿಲ್ಲ.

ದಾವಾ ಐಟಂ ನಂ.3 ಸರ್ವೆ ನಂ.93/6 ರಲ್ಲಿ 1 ಎಕರೆ 3 ಗುಂಟೆ ಜಮೀನಿನ ಕಂದಾಯ ದಾಖಲೆಗಳಲ್ಲಿ ಇರುವ ತಿಮ್ಮಯ್ಯ ಹಾಗೂ ದಾವಾ ಐಟಂ ನಂ.2 ಜಮೀನಿನ

ಕಂದಾಯ ದಾಖಲೆಗಳಲ್ಲಿ ಇರುವ ತಿಮ್ಮಯ್ಯ ಒಬ್ಬ ವ್ಯಕ್ತಿ. ಸಾಕ್ಷಿ ಮುಂದುವರೆದು ಜಮೀನುಗಳು ಜಂಟಿಯಾಗಿರುವ ಕಾರಣ ತಿಮ್ಮಯ್ಯನವರ ಹೆಸರು ಬರುತ್ತಿದೆ. ಸದರಿ ದಾವಾ ಐಟಂ ನಂ.3 ರಲ್ಲಿ 16 ಗುಂಟೆ ಜಮೀನು ಕಾವೇರಿ ನೀರಾವರಿ ನಿಗಮಕ್ಕೆ ಭೂ ಸ್ವಾಧೀನ ಆಗಿದೆ ಎಂದರೆ ಸರಿ. ಸದರಿ ಪರಿಹಾರದ ಹಣವನ್ನು ಕೆಂಪೆಗೌಡ ರವರು ಪಡೆದಿದ್ದಾರೆ. ಸದರಿ ಪರಿಹಾರ ಹಣವನ್ನು ಪಡೆಯಲು ನನ್ನ ತಂದೆ ಮತ್ತು ಉಳಿದ ಕುಟುಂಬಸ್ಥರು ಒಪ್ಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿ ಇದ್ದ ಕಾರಣ ಅವರು ಪಡೆದಿದ್ದಾರೆ. ಒಟ್ಟು ಕುಟುಂಬದಲ್ಲಿ ಇದ್ದ ಸಂದರ್ಭದಲ್ಲಿ ವಂಶವೃಕ್ಷ, ಕುಟುಂಬಸ್ಥರ ಒಪ್ಪಿಗೆ ಪತ್ರ ಹಾಗೂ ನಷ್ಟ ಪತ್ರ ದಾಖಲೆಗಳನ್ನು ಪರಿಹಾರದ ಹಣವನ್ನು ಬಿಪಡುಗಡೆ ಮಾಡುವ ಸಂದರ್ಭದಲ್ಲಿ ಪಡೆಯುತ್ತಾರೆಂದರೆ ಕೆಂಪೆಗೌಡ ರವರು ಸದರಿ ದಾಖಲೆಗಳನ್ನು ಕೊಟ್ಟಿರುತ್ತಾರೆ. ಕೆಂಪೆಗೌಡ ರವರು ಸದರಿ ಜಮೀನಿನ ಅನುಭವದಲ್ಲಿ ಇದ್ದ ಕಾರಣ ಹಾಗೂ ಸದರಿ ಜಮೀನು ಅವರ ಭಾಗಾಂಶಕ್ಕೆ ಬಂದ ಕಾರಣ ಪರಿಹಾರ ಹಣವನ್ನು ಪಡೆದಿದ್ದಾರೆಂದರೆ ಸರಿಯಲ್ಲ. ಪರಿಹಾಣ ಹಣವನ್ನು ಪಡೆಯುವ ಸಂದರ್ಭದಲ್ಲಿ ನಮ್ಮ ವಂಶಸ್ಥರು ಅಥವಾ ರಂಗೇಗೌಡ ಮತ್ತು ಗೋವಿಂದಪ್ಪನವರ ವಂಶಸ್ಥರು ತಕರಾರು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕುಟುಂಬದ ನಿರ್ವಹಣೆ ಮಾಡುತ್ತಿದ್ದ ಕಾರಣ ಪಡೆದಿದ್ದಾರೆ.

ದಾವಾ ಐಟಂ ನಂ.9 ಸರ್ವೆ ನಂ.77 ರಲ್ಲಿ 3 ಎಕರೆ 33 ಗುಂಟೆ ಜಮೀನಿನ ಕಂದಾಯ ದಾಖಲೆಗಳ ಕಾಲಂ ನಂ.12 ರಲ್ಲಿ ತಿಮ್ಮಯ್ಯ ರವರ ಹೆಸರು ಬರುತ್ತಿದೆ ಎಂದರೆ ಅದರ ಮಾಹಿತಿ ನನಗೆ ಇಲ್ಲ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ತಕರಾರು ಇರುವುದಿಲ್ಲ.

ದಾವಾ ಐಟಂ ನಂ.11 ಸರ್ವೆ ನಂ.3 ರ ನಿಪಿ-10 ರಲ್ಲಿ ಇರುವ ಹೆಸರುಗಳ ನಮೂದು ಸರಿ ಇದೆ. ಸದರಿ ಸರ್ವೆ ನಂಬರ್ ನಲ್ಲಿ 4 ಎಕರೆ 13 ಗುಂಟೆ ಪೈಕಿ 1 ನೇ ಪ್ರತಿವಾದಿಯ ಗಂಡ ಕೆಂಪೆಗೌಡ ರವರಿಗೆ 1 ಎಕರೆ 13 ಗುಂಟೆ, ಬಿ.ಬಿ 647 ರ ಪ್ರಕಾರ ಮತ್ತು ನನ್ನ ತಾತ ಬೋರಯ್ಯ ರವರಿಗೆ ಬಿ.ಬಿ 648 ರ ಪ್ರಕಾರ 1 ಎಕರೆ , ರಂಗೇಗೌಡರವರಿಗೆ 1 ಎಕರೆ ಬಿ.ಬಿ 649 ರ ಪ್ರಕಾರ 1 ಎಕರೆ ಮತ್ತು ಗೋವಿಂದಯ್ಯನವರಿಗೆ 1 ಎಕರೆ ಬಿ.ಬಿ 650 ರ ಪ್ರಕಾರ ಖಾತೆ ಪಹಣಿ RR ಪೂರ್ವದಲ್ಲಿ ಆಗಿರುತ್ತದೆ ಎಂದರೆ ಸರ್ಕಾರಿ ಸವಲತ್ತು ಪಡೆಯಲು

ಸದರಿಯವರ ಹೆಸರಿಗೆ ದಾಖಲೆ ಆಗಿದೆ. ಕೆಂಪೆಗೌಡ, ಬೋರಯ್ಯ, ರಂಗೇಗೌಡ ಹಾಗೂ ಗೋವಿಂದಯ್ಯ ರವರು ಅವರ ಜೀವಿತ ಕಾಲದಲ್ಲಿ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

(Further cross examination deferred at the request of counsel for the defendant No.5, 7, 8, 10.)

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi